**<u>ಪ್ರಧಾನ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>**

**ಸಿಸಿ ನಂಬ್ರಃ 1112/2023 ಸಿ.ಡಬ್ಲ್ಯೂ - 1**

ದಿನಾಂಕಃ 27-12-2023 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು

**<u>ಮುಂದುವರಿದ ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಬಿ.ಆರ್ . ಎನ್ ರವರಿಂದ</u>**

ಕಳೆದ ಬಾರಿ ನನ್ನ ಪಾಟಿ ಸವಾಲಿನಲ್ಲಿ ಕೇಳಿದ ಆದಾಯ ತೆರಿಗೆ ಸಂಬಂದಿಸಿದ ದಾಖಲಾತಿಗಳನ್ನು , ಬ್ಯಾಂಕಿನ ವ್ಯವಹಾರದ ದಾಖಲೆಗಳನ್ನು ಈಗ ತಂದಿಲ್ಲ ಆದರೆ ನನ್ನ ಬಳಿ ಲಭ್ಯವಿದೆ. ನನ್ನಿಂದ ಸಾಲ ಪಡೆದ ಉದ್ದೇಶವಾದ ಚಿನ್ನ ಬಿಡಿಸುವುದು ಮತ್ತು ಶಾಮೀಯಾನ ವ್ಯವಹಾರದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಪಡೆಯಲು ಪ್ರಯತ್ನಿಸಿಲ್ಲ . ನಾನು ಈ ಹಿಂದೆ ಹೇಳಿರುವ ಪ್ರಕರಣಗಳಲ್ಲೂ ಯಾವುದೇ ದಾಖಲೆಗಳನ್ನು ಪಡೆದು ಹಣದ ವ್ಯವಹಾರಗಳನ್ನು ಮಾಡಿರುವುದಿಲ್ಲ ಕಾರಣ ಬ್ಯಾಂಕಿನ ಚೆಕ್ ಗಳ ಮೂಲಕ ವ್ಯವಹಾರಗಳನ್ನು ಮಾಡಿದ್ದೇನೆ. ಈ ಪ್ರಕರಣದಲ್ಲಿ ಯಾವ ದಿನಾಂಕ ದಿಂದ ಎಷ್ಟು ಕಂತುಗಳಲ್ಲಿ ಹಣ ನೀಡಿದ್ದೇನೆ ಎಂದು ನೆನಪಿಲ್ಲ . ಸಾಮಾನ್ಯ ವಾಗಿ ಕನಿಷ್ಠ 2 ಬಾರಿಗಿ ಂತ ಹೆಚ್ಚು ಹಣವನ್ನು ನೀಡಿದಾಗ ನಮ್ಮ ನೆನಪಿಗಾ ನೀಡಿದ ಮೊತ್ತದ ಬಗ್ಗೆ ಎಲ್ಲಿಯಾದರೂ ಬರೆದು ಇಟ್ಟಿ ಕೊಳ್ಳುತ್ತೇವೆ ಎಂದರೆ ಸಾಕ್ಷಿಯು ಚೆಕ್ ಇದ್ದ ಕಾರಣ ನೆನಪಿಗಾಗಿ ಬರೆದಿಟ್ಟ ಎಂದು ಉತ್ತರಿಸಿರುತ್ತಾರೆ . ಈ ಪ್ರಕರಣದಲ್ಲೂ ಚೆಕ್ ನ ಮೂಲಕ ಆರೋಪಿಗೆ ಹಣ ವ್ಯವಹರಿಸಿದ ಕಾರಣ ಮೊತ್ತವನ್ನು ನಾನು ಬರೆದಿಟ್ಟ ಎಂದರೆ ಸರಿ. ಈ ಪ್ರಕರಣ ದಾಖಲಿಸಲು ಪಿರ್ಯಾದಿ ತಯಾರಿಕೆಗಾಗಿ ಮಾಹಿತಿ ನಾನೇ ನೀಡಿದ್ದೇನೆ. ನಾನು ಮಾಡಿದ ವ್ಯವಹಾರದ ಬಗ್ಗೆ ಚೆಕ್ ನ ವಿವರ ಮತ್ತು ಪಾಸ್ ಬುಕ್ ನ ವಿವರಗಳನ್ನು ಪಾಸ್ ಪುಸ್ತಕದ ನಮೂದು ಇರುವ ಕಾರಣ ವಕೀಲರಿಗೆ ನೀಡಿರುತ್ತೇನೆ. ದೂರು ದಾಖಲಿಸುವ ಸಂದರ್ಭ ಸದರಿ ಪಾಸ್ ಪುಸ್ತಕವನ್ನು ಹಾಜರುಪಡಿಸಿದ್ದೇನೆ. ನಾನು ಸಲ್ಲಿಸಿದ ದೂರಿನಲ್ಲಿ ನನ್ನ ಚೆಕ್ ನಂಬರ್ ಗಳು ಮತ್ತು ದಿನಾಂಕ ನಮೂದಿಸಲಾಗಿದೆ. ನಾನು ನನ್ನ ನೆನಪಿಗಾಗಿ ಕೊಟ್ಟ ಮೊತ್ತ ಬಗ್ಗೆ ಎಲ್ಲೂ ನಮೂದು ಮಾಡಿ ಇಟ್ಟುಕೊಂಡಿಲ್ಲ . ನಾನು ಆರೋಪಿಯೊಂದಿಗೆ ಬಡ್ಡಿಗಾಗಿ ವ್ಯವಹಾರ ಮಾಡಿಲ್ಲ ಎಂದು ಈ ಪ್ರಕರಣದಲ್ಲಿ ತಿಳಿಸಿದ್ದೇನೆ. ಅದರಂತೆ ಆರೋಪಿಯಿಂದ ಈ ಪ್ರಕರಣದಲ್ಲಿ ಬರಬೇಕು ಎಂದು ದೂರಿನಲ್ಲಿ ಕೋರಿರುವ ಮೊತ್ತದಲ್ಲಿ ಹೇಳಲಿಲ್ಲ ಹಾಗೂ ಸೇರಿಸಿಲ್ಲ .

ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಸ್ವಲ್ಪ ಮಟ್ಟಿಗೆ ಬರುತ್ತದೆ. ನಿಸಿ 4 ರ ವಿತರಣೆಗಾಗಿ ಮಾಹಿತಿ ನಾನೇ ನೀಡಿದ್ದೇನೆ. ನಿಸಿ 4 ರಲ್ಲಿ ಶೇಕಡಾ 16 ರಂತೆ ಬಡ್ಡಿಯನ್ನು ಕೋರಿ ನಾನು ವಕೀಲರ ಮೂಲಕ ತಿಳುವಳಿಕೆ ಹೊರಡಿಸಿಲ್ಲ . ನಮ್ಮ ನಡುವೆ ವ್ಯವಹಾರ ನಡೆದ

ಸಂದರ್ಭ ಆರೋಪಿ ಪಿಗ್ಮಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ಆರೋಪಿ ಪಿಗ್ಮಿ ವ್ಯವಹಾರ ಮಾಡುತ್ತಿದ್ದ ಕಾರಣ ನಾನು ಆತನೊಂದಿಗೆ ಸದರಿ ವ್ಯವಹಾರದ ಉದ್ದೇಶಕ್ಕಾಗಿ ನನ್ನ ಯಾವುದೇ ಚೆಕ್ ನ್ನು ನೀಡಿಲ್ಲ . ಈ ದಿನವು ನಾನು ಆತನಿಂದ ಯಾವುದೇ ಬಡ್ಡಿಯನ್ನು ಕೋರುತ್ತಿಲ್ಲ. ನಾನು ಆರೋಪಿನಿಂದ ಈಗ ಒಟ್ಟು ರೂ 1800000/- ಮರುಪಾವತಿಗಾಗಿ ಕೋರುತ್ತಿದ್ದೇನೆ. ಸದರಿ ಮೊತ್ತ ಬಡ್ಡಿ ಯನ್ನು ಒಳಗೊಂಡಿಲ್ಲ . ನನ್ನಿಂದ ಆಗಲೇ ಪಡೆದಿದ್ದ ಯಾವುದೇ ಮೊತ್ತವನ್ನು ಮರುಪಾವತಿಸದೇ ಮತ್ತು ಹಣ ಪಡೆದಿರುತ್ತಾರೆ. ಸಾಮಾನ್ಯವಾಗಿ ಹಣ ಮರುಪಾವತಿ ಮಾಡದಿದ್ದಾಗ ದಾಖಲೆ ಪಡೆದು ಮುಂದಕ್ಕೆ ಹಣ ನೀಡುತ್ತಾರೆ ಎಂದರೆ ಸರಿ.

ಆರೋಪಿಗೆ ಸಾಗರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಸಾಲದ ಅರ್ಜಿಯ ದೃಢೀಕೃತ ನಕಲನ್ನು ತೋರಿಸಿದ್ದು ಅದನುನ ನೋಡಿ ಒಪ್ಪಿದ ಮೇರೆಗ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ದಾಖಲೆಯಂತೆ ಸಾಲಗಾರರು ನನ್ನ ಹೆಂಡತಿ ಮತ್ತು ನಾನು ಒಂದನೇ ಜಾಮೀನುದಾರ. ಆರೋಪಿ 2 ನೇ ಜಾಮೀನುದಾರ ಎಂದರೆ ಸರಿ. ಸದರಿ ಸಾಲವನ್ನು ನಾವು ಮರುಪಾವತಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಆರೋಪಿ ನನಗೆ ಹಣ ಹಿಂತಿರುಗಿಸದ ಕಾರಣ ನಾನು ಸಾಲ ಮರುಪಾವತಿ ಮಾಡಲು ಆಗಿಲ್ಲ ಎಂದು ನುಡಿದಿರುತ್ತಾರೆ . ಸದರಿ ಸಾಲದ ಮರುಪಾವತಿಗಾಗಿ ಸಾಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ದಾಖಲಿಸಿರುವ ಪ್ರಕರಣದಲ್ಲಿ ಆರೋಪಿ ಒಳಗೊಂಡಂತೆ ನಮಗೆ ತಿಳುವಳಿಕೆ ಹೊರಡಿಸಲಾಗಿದೆ ಎಂದರೆ ಸರಿ . ಸಾಕ್ಷಿಯು ಸದರಿ ನೋಟಿಸಿನ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 2 ಎಂದು ಗುರುತಿಸಲಾಯಿತು. 2019 ರ ನವೆಂಬರ್ ರಲ್ಲಿ ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ಈ ಪ್ರಕರಣವನ್ನು ದಾಖಲಿಸಿದ ನಂತರ ನಿಡಿ 1 ರ ಸಾಲದ ಅರ್ಜಿಯಂತೆ ವ್ಯವಹರಿಸಿರುತ್ತೇನೆ ಎಂದರೆ ಸರಿಯಲ್ಲ . 2021-22 ರಲ್ಲಿ ನಿಡಿ 2 ರಲ್ಲಿ ಕಾಣಿಸಿರುವ ದಾವೆ ದಾಖಲಾಗಿದೆ ಎಂದರೆ ಸರಿ. ನನ್ನ ಮತ್ತು ಆರೊಪಿಯ ನಡುವೆ ನಡೆದಿರುವ ವ್ಯವಹಾರದ ಈ ಪ್ರಕರಣಕ್ಕೂ ನಾವು ನಿಡಿ 1 ರಲ್ಲಿ ಪಡೆದಿರುವ ಸಾಲಕ್ಕೂ ಯಾವುದೇ ಸಂಬಂದವಿಲ್ಲ ಎಂದರೆ ಸರಿ. ನಾವು ಪಡೆದ ಸಾಲವನ್ನು ಆರೋಪಿ ಮರುಪಾವತಿದ ಕಾರಣ ಆತನ ವಿರುದ್ದ ಈ ಪ್ರಕರಣವನ್ನು ದಾಖಲಿಸಿದ್ದೇನೆ ದೂರಿನಲ್ಲಿ ಹೇಳಿ ಬರಿಸಿಲ್ಲ. ಪಿಗ್ಮಿ ಒಳಗೊಂಡಂತೆ ಆರೋಪಿ ಮತ್ತು ನನ್ನ ನಡುವೆ ಸುಮಾರು 2.5 ವರ್ಷಗಳ ಕಾಲ ವ್ಯವಹಾರ ನಡೆದಿರುತ್ತದೆ.

ನನಗೆ ಇಂಗ್ಲೀಷ್ ಬರೆಯಲು ಬರುತ್ತದೆ. ನಿಸಿ 1 ರ ಬರವಣಿಗೆ ಆರೋಪಿಯ ಎದುರು ನಾನೇ ಮಾಡಿರುತ್ತೇನೆ. ಇದನ್ನು ಹೊರತುಪಡಿಸಿ ಆತನ ಬೇರೆ ಯಾವುದೇ ಚೆಕ್ ನನ್ನ ಬಳಿ ಇಲ್ಲ . ಪಿಗ್ಮಿ ವ್ಯವಹಾರದ ಸಂಬಂದ ನಾನು ಆತನಿಂದ 2 ರಿಂದ 3 ಖಾಲಿ ಚೆಕ್ ಗಳನ್ನು ಸಹಿ ಮಾಡಿಸಿ ಪಡೆದಿದ್ದೇನೆ ಎಂದರೆ ಸರಿಯಲ್ಲ . ಸದರಿ ಚೆಕ್ ಗಳನ್ನು ಪಡೆಯುವ ಕಾಲಕ್ಕೆ ನಾನು ಆತನಿಗೆ ಯಾವುದೇ ಹಣ ನೀಡಿರಲಿಲ್ಲ ಎಂದರೆ ಸಾಕ್ಷಿಯು ನಾನು ಬೇರೆ ಯಾವುದೇ ಚೆಕ್ ಪಡೆದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಆರೋಪಿಯನ್ನು ಜಾಮೀನುದಾರನ್ನಾಗಿ ತೋರಿಸಿ

ಪಡೆದ ಸಾಲದ ವ್ಯವಹಾರದಲ್ಲಿ ಭಿನ್ನಭಿಪ್ರಾಯ ಬಂದ ವೈರತ್ವದಿಂದ ಅತನಿಗೆ ಪಾಟ ಕಲಿಸಲು ನಿಸಿ 1 ನ್ನು ನಾನೇ ಭರ್ತಿ ಮಾಡಿ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ಸಾಮಾನ್ಯವಾಗಿ ಯಾವುದೇ ದಾಖಲೆ ಇಲ್ಲದೆ, ಆದಾರ  ಪಡೆಯದೇ ರೂ 1800000 ದಂತ ಮೊತ್ತವನ್ನು ನಿರಂತರವಾಗಿ ಕಂತುಗಳಲ್ಲಿ ಒಬ್ಬ ವ್ಯಕ್ತಿ ಮರುಪಾವತಿ ಮಾಡದಿದ್ದರೂ ಕೂಡ ನೀಡುವುದು ಅಸಹಜ ಎಂದರೆ ಸಾಕ್ಷಿಯು ನಾನು ನೀಡಿದ್ದೇನೆ ಎಂದು ಉತ್ತರಿಸಿರುತ್ತಾರೆ. ಆರೋಪಿ ನನಗೆ ನ್ಯಾಯಾಬದ್ದ ಮೊತ್ತವನ್ನು ಮರುಪಾವತಿ ಮಾಡುವ ಬಾಕಿ ಇಲ್ಲದಿದ್ದರೂ ಅತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ಆತನ ವಿರುದ್ದ ಹಟ ಸಾಧನೆಗಾಗಿ ಈ  ಪ್ರಕರಣ ದಾಖಲಿಸಿದ್ದು ಎಂದರೆ ಸರಿಯಲ್ಲ . ಆರೋಪಿಯು ಪಿಗ್ಮಿ ಕಲೆಕ್ಟರ್ ಆದ ಕಾರಣ ನನ್ನ ಚೆಕ್ ಗಳನ್ನು ಆತನಿಗೆ ನೀಡಿ ನಗದಿಕರೀಸುತ್ತಿದ್ದೆ ಎಂದರೆ ಸರಿಯಲ್ಲ . ಆ ರೀತಿಯ ಸಂದರ್ಭ ದುರುಪಯೋಗ ಪಡಿಸಿಕೊಂಡು ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎದಂರೆ ಸರಿಯಲ್ಲ . ಆದ ಕಾರಣ ಯಾವುದೇ ಚೆಕ್ ನ ವಿವರಣೆ , ಅದರ ಪ್ರತಿಗಳನ್ನು ಹಾಜರುಪಡಿಸದೇ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ನಿಸಿ 1 ನ್ನು ಆರೋಪಿ ಸಾಲದ ಮರುಪಾವತಿಗಾಗಿ ನೀಡಿಲ್ಲದೆ ಮೋಸದಿಂದ ಅದನ್ನು ಪಡೆದುಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ನನ್ನ ಮೇಲೆ ಯಾವುದೇ ಕ್ರಮ ಆತ ಕೈಗೊಳ್ಳ ಬಾರದು ಎಂಬ ಕಾರಣದಿಂದ ನಿಡಿ 1 ಸಾಲ ಪಡೆದು ಅದನ್ನು ಮರುಪಾವತಿಸದೇ ಆರೋಪಿ ಯನ್ನು ಸಿಲುಕಿಸಿದ್ದೇನೆ ಎಂದರೆ ಸರಿಯಲ್ಲ .

**ಮಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ**